# ಹೇಮಾವತಿಗ ಭ್ರಮನಿರಸನ

ಸ್ನಾನ ಮಾಡಿ ಬಚ್ಚಲು ಮನೆಯಿಂದ ಹೊರ ಬಂದು ಇವತ್ತು ಅವರ ಎದುರಿಗೆ ನಾನು ಬಸ್ಸಿನಲ್ಲಿ ಕಂಡ ಚಿಕ್ಕಹುಡುಗಿಯಂತೆ ಕಾಣಿಸಿಕೊಳ್ಳಬಾರದು. ಜೀವನದ ಭಾರವನ್ನು ಹೊರಲು ಸಿದ್ಧಳಾದ ಪ್ರಬುದ್ಧ ಯುವತಿಯಂತೆ ಕಾಣಿಸಿಕೊಳ್ಳಬೇಕು ಎನಿಸಿ ಸೂಟುಕೇಸಿನಲ್ಲಿದ್ದ ಎಂದೋ ಕೊಂಡುಕೊಂಡಿದ್ದ ಹೊಸ ಸೀರೆ, ರವಿಕೆಗಳನ್ನು ಹೊರತೆಗೆದು ಧರಿಸಿದೆ. ನೀಟಾಗಿ ತಲೆ ಬಾಚಿ ಜಡೆ ಹೆಣೆದುಕೊಂಡು ಮುಖಕ್ಕೆ ತೆಳುವಾಗಿ ಪೌಡರ್ ಲೇಪಿಸಿಕೊಂಡೆ. ವ್ಯಾನಿಟಿ ಬ್ಯಾಗಿನಲ್ಲಿದ್ದ ವಿಸಿಟಿಂಗ್ ಕಾರ್ಡ್ ತೆಗದುಕೊಂಡು ವಿಳಾಸವನ್ನೊಮ್ಮೆ ಓದಿ  ಮತ್ತೆ ಅದನ್ನು ಸಣ್ಣ ಪರ್ಸ್‌ನಲ್ಲಿ ಜೋಪಾನವಾಗಿಟ್ಟುಕೊಂಡು, ರೂಮಿಗೆ ಬೀಗ ತಗುಲಿಸಿ ಹೊರಟೆ. ರಸ್ತೆಯ ಬದಿಯಲ್ಲಿ ಹೂವು ಮಾರುತ್ತಿದ್ದ ಹೆಂಗಸು ಕಾಣಿಸಿ, ಹತ್ತಿರ ಹೋಗಿ ಒಂದು ಮೊಳ ಮಲ್ಲಿಗೆಯ ಹೂವಿನ ಮಾಲೆಯನ್ನು ಖರೀದಿಸಿದೆ. ರಸ್ತೆಯಲ್ಲಿ ನಡೆಯುತ್ತಲೇ ಜಡೆಯಲ್ಲಿದ್ದ ಹೇರ್‌ಪಿನ್ ತೆಗೆದು ಮಲ್ಲಿಗೆ ಮಾಲೆಯನ್ನು ಅದರಲ್ಲಿ ಸಿಕ್ಕಿಸಿ ಮುಡಿದುಕೊಂಡು ಕೆಂಗೇರಿಯ ಸಿಟಿ ಬಸ್ ನಿಲ್ದಾಣಕ್ಕೆ ಬಂದು ಬಸ್ಸು ಹತ್ತಿ ನಿಂತುಕೊಂಡೆ. ಜನರಿಂದ ತುಂಬಿದ್ದ ಬಸ್ಸಿನಂತೆ ನನ್ನ ಮನದಲ್ಲಿಯೂ ಸಾವಿರ ಆಲೋಚನೆಗಳು, ಆತಂಕಗಳು

